## ಅಗ್ನಿಸಾಕ್ಷಿಯಲ್ಲ, ಚಂದ್ರಿಕಳ ದ್ವೇಷ ಸಾಕ್ಷಿ!

ಪ್ರತಿ ನಿತ್ಯ ಪ್ರಸಾರವಾಗುತ್ತಿರುವ ಧಾರಾವಾಹಿಗಳು ಅದೆಷ್ಟೋ, ಆದರೆ ಪ್ರಸಾರವಾಗುತ್ತಿರುವ ಎಲ್ಲಾ ವಾಹಿನಿಗಳಲ್ಲೂ ಮಹಿಳೆಯರನ್ನೇ ವಿಲನ್ ಆಗಿ ಬಿಂಬಿಸುತ್ತಿದ್ದಾರೆ. ವಿಲನ್ ಪ್ರಧಾನವಾದ ಅಗ್ನಿಸಾಕ್ಷಿಯು ಪ್ರಾರಂಭವಾದಾಗ ತುಂಬಾ ಚೆನ್ನಾಗಿ ಬರುತ್ತಿತ್ತು. ಈ ಧಾರಾವಾಹಿಯನ್ನು ತುಂಬಾ ಉತ್ಸುಕತೆಯಿಂದ, ಕಾತುರದಿಂದ ಕಾಯುತ್ತಿದ್ದ, ನೋಡುತ್ತಿದ್ದ ವೀಕ್ಷಕರು, ಇದೀಗ ಚಂದ್ರಿಕಾ ಎಂಬಾಕೆಯ ಕೆಟ್ಟತನಕ್ಕೆ ಇನ್ನೂ ಬ್ರೇಕ್ ಹಾಕದ್ದನ್ನು ಕಂಡು ಅಗ್ನಿಸಾಕ್ಷಿ ಧಾರಾವಾಹಿಯನ್ನು ನೋಡುವುದು ಎಂದರೆ ವಾಕರಿಕೆ ಬರುವಂತಾಗಿದೆ ಎನ್ನುತ್ತಿದ್ದಾರೆ. ಇಷ್ಟು ತಿಂಗಳಾದರೂ ಅಷ್ಟೊಂದು ಮಂದಿ ಬುದ್ಧಿವಂತರಿದ್ದರೂ ಕೂಡ ಇನ್ನೂ ಚಂದ್ರಿಕಾಳ ನಡವಳಿಕೆಯನ್ನು ತಿಳಿದುಕೊಳ್ಳುವವರು ಒಬ್ಬರೂ ಇಲ್ಲದಂತೆ ಚಿತ್ರಿಸುತ್ತಿದ್ದಾರೆ ಧಾರಾವಾಹಿಯ ನಿರ್ದೇಶಕರಾದ ಮೈಸೂರು ಮಂಜು. ಅವರು ಈ ಧಾರಾವಾಹಿಗೆ ಕಡಿವಾಣ ಹಾಕುವುದು ಸೂಕ್ತ ಹಾಗೂ ಈ ಧಾರಾವಾಹಿಗೆ ಅಗ್ನಿಸಾಕ್ಷಿ ಎನ್ನುವುದಕ್ಕಿಂತ 'ಚಂದ್ರಿಕಾಳ ದ್ವೇಷವೇ ಸಾಕ್ಷಿ' ಎಂದು ಮರುನಾಮಕರಣ ಮಾಡಬಹುದಿತ್ತು.

—ಸಿ.ಎಸ್. ರಾಜೇಂದ್ರ, ಮೈಸೂರು

## ವಾರದ ಪತ್ರ ಕಿವಿಮಾತು!

ಬೆಂಗಳೂರಲ್ಲಿ ಕ್ರೈಂಗಳು ಜಾಸ್ತಿ ಆಗ್ತಿವೆ ಅಂತ ಹೆದರಬೇಡಿ. ಪತ್ತೇದಾರಿ ಪ್ರತಿಭಾಗೆ ಕ್ರೈಂ ಬಗ್ಗೆ, ಕ್ರೈ ಮಾಡುವವರ ಬಗ್ಗೆ ಎಲ್ಲಾ ಕನಸಲ್ಲೇ ಕಾಣುತ್ತದೆ. ತಕ್ಷಣ ಅವಳನ್ನು ಸಂಪರ್ಕಿಸಿ. ಸರ್ಕಾರ ಅವಳನ್ನ ನೇಮಕ ಮಾಡಿಕೊಂಡರೆ ಎಷ್ಟು ನಿರಾಳ ಬೆಂಗಳೂರಿಗೆ!

ಇನ್ನು ಹೆಂಗಳೆಯರಿಗೆ ತುಂಬಾ ಅಂದವಾಗಿ ಕಾಣುವ ಬಯಕೆ. ಅದಕ್ಕೆ ಹೀಗೆ ಮಾಡಿ. ಟಿವಿಯಲ್ಲಿ ಬರುವ ಸೀರಿಯಲ್‌ಗಳನ್ನು ಹೆಚ್ಚೆಚ್ಚು ನೋಡಿ ಕಲಿಯಿರಿ. ಉಟ್ಕೊಂಡ ಸೀರೆ, ಹಾಕ್ಕೊಂಡ ಬ್ಲೌಸ್, ಧರಿಸಿದ ಒಡವೆಗಳು ಯಾವುದೂ ಒಂದು ಚೂರೂ ಅಲ್ಲಾಡದಂತೆ ಹೇಗೆ ಕಾಪಾಡ್ಕೋತಾರೆ. ಒಡವೆಗಳೆಲ್ಲಾ ಇವರ ಮೈ ಮೇಲೆ 24 ಗಂಟೆಯೂ (ಕತೆ ನಡೆಯುವಾಗ) ಮಲಗಿದಾಗ, ಎದ್ದಾಗ, ಅಡುಗೆ ಮಾಡುವಾಗ, ತಿನ್ನುವಾಗ ಇವರ ಮೈಮೇಲೇ ರಾರಾಜಿಸುತ್ತಿರುತ್ತದೆ.

ಅಬ್ಬಾ ಟಿವಿಯಿಂದ ಎಷ್ಟೆಲ್ಲ ಪ್ರಯೋಜನಗಳು ಶ್ರೀಸಾಮಾನ್ಯರಿಗೆ! ತುಂಬಾ ಥ್ಯಾಂಕ್ಸ್.

—ಚಂದ್ರಿಕಾ, ಚಿತ್ರದುರ್ಗ

## ಕಾಮಿಡಿಯಲ್ಲದ ಟಾಕೀಸ್

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಮಜಾ ಟಾಕೀಸ್' ಮೊದಮೊದಲು ಎಲ್ಲರನ್ನೂ ರಂಜಿಸಿದ್ದಂತೂ ನಿಜ. ಬರಬರುತ್ತಾ ತನ್ನ ನೈಜತೆಯನ್ನು ಕಳೆದುಕೊಂಡು ಸಪ್ಪೆ ಎನಿಸಿದರೂ ನೋಡಬಹುದಾದಂತಹ ಶೋ ಆಗಿತ್ತು. ಆದರೆ ಈಗ ಪ್ರಸಾರವಾಗುತ್ತಿರುವ 'ಕಾಮಿಡಿ ಟಾಕೀಸ್' ದೇವರಿಗೇ ಪ್ರೀತಿ. ತನ್ನ ಎಲ್ಲಾ ಇಮೇಜನ್ನು ಇದರಿಂದ ಸೃಜನ್ ಕಳೆದುಕೊಳ್ಳುತ್ತಿದ್ದಾರೆ ಎನ್ನುವುದು ಅವರ ಅಭಿಮಾನಿಗಳ ಅನಿಸಿಕೆ. ಸ್ವಲ್ಪವೂ ರಂಜಿಸದ ಈ ಶೋ ಕೊನೆಯಲ್ಲಿ ಸೃಜನ್, ರಂಜಿತಾ, ಸಿದ್ಧಾರ್ಥನನ್ನು ಮಾತನಾಡಲು ಬಿಡದ ಆ ಸಂದರ್ಭವಂತೂ ಪ್ರೇಕ್ಷಕರಿಗೆ ಬಾಲಿಶ ಎನಿಸುತ್ತದೆ. ದಯವಿಟ್ಟು ಸೃಜನ್ ಅವರು ಮಜಾ ಟಾಕೀಸಿನಂತಹ ಒಳ್ಳೆ ಕಾರ್ಯಕ್ರಮ ನೀಡಿ ತಮ್ಮ ಇಮೇಜನ್ನು ಉಳಿಸಿಕೊಳ್ಳುವಂತಾಗಲಿ.

—ಮುಂಡಾಶಿ ಶ್ವೇತಾಸುಧಾ, ಉಡುಪಿ

## ಹೊರ ರಾಜ್ಯಗಳಲ್ಲಿ ಕನ್ನಡ ವಾಹಿನಿಗಳು

ಅದ್ದೂರಿ ಚಲನಚಿತ್ರ 'ಕುರುಕ್ಷೇತ್ರ' ಚಿತ್ರೀಕರಣಕ್ಕೆ ಹೈದ್ರಾಬಾದ್‌ಗೆ ಹೋದಾಗ, ಕನ್ನಡ ಚಿತ್ರ ನಟ ದರ್ಶನ್ ಅಲ್ಲಿನ ಸ್ಟಾರ್ ಹೋಟೆಲ್ ಒಂದರಲ್ಲಿ ತಂಗಿದ್ದರಂತೆ. ಅಲ್ಲಿ ನೋಡಲು ಅವರಿಗೆ ಒಂದೇ ಒಂದೂ ಕನ್ನಡ ಟಿವಿ ಚಾನೆಲ್ ದೊರಕದಿದ್ದಾಗ ಅವರು ಗಲಾಟೆ ಮಾಡಿ ಕನ್ನಡ ಚಾನೆಲ್ ಪಡೆದುಕೊಂಡರಂತೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯದ ಸ್ಥಿತಿ–ಗತಿ ಏನು? ಕರ್ನಾಟಕದ ಪಂಚತಾರಾ ಹೋಟೆಲ್‌ಗಳಲ್ಲಿ ಅರೇಬಿಕ್, ಇಂಗ್ಲಿಷ್, ಹಿಂದಿ, ತಮಿಳು ಮತ್ತು ತೆಲುಗು ಚಾನೆಲ್‌ಗಳು ದೊರಕುತ್ತಿದ್ದು, ಕನ್ನಡ ಚಾನೆಲ್‌ಗಳು ದೊರಕುತ್ತಿಲ್ಲ ಎಂದು ನಟ ದಿ.ವಿಷ್ಣುವರ್ಧನ್ ಒಮ್ಮೆ ವ್ಯಾಕುಲದಿಂದ ದೂರಿದ್ದರು. ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಕನ್ನಡ ವಾಹಿನಿಗಳನ್ನು ಕಾಡಿ–ಬೇಡಿ ಪಡೆದುಕೊಳ್ಳಬೇಕಂತೆ. ಅಪಾರ್ಟ್‌ಮೆಂಟ್ ಒಂದರಲ್ಲಿ ಕನ್ನಡ ವಾಹಿನಿಯನ್ನು ಕೇಳಿದ್ದಕ್ಕೆ ಅವರನ್ನು 'ವಾಟಾಳ ನಾಗರಾಜ' ಎಂದು ಗೇಲಿ ಮಾಡಿದರಂತೆ ಮತ್ತು ಅಲ್ಲಿದ್ದ ಕನ್ನಡಿಗರೇ ಅವರಿಗೆ ಸಹಾಯ ಮಾಡಲಿಲ್ಲವಂತೆ.

ತಾಯ್ನಾಡಿನಲ್ಲೇ ಕನ್ನಡದ ಸ್ಥಿತಿ–ಗತಿ ಹೀಗಿರುವಾಗ, ಕನ್ನಡೇತರ ರಾಜ್ಯದಲ್ಲಿನ ಕನ್ನಡದ ಪರಿಸ್ಥಿತಿ ಬಗ್ಗೆ ಚಿಂತಿಸಿ ಫಲವೇನು? ಅತ್ತರೂ ಹಾಲುಣ್ಣಿಸದಿರುವ ಈ ಕಾಲದಲ್ಲಿ ಅಳದೇ ಹಾಲು ದೊರಕಬಹುದೇ? ನಟ ದರ್ಶನ್‌ರಂತೆ ಎಷ್ಟು ಜನ ಕನ್ನಡಿಗರು ಹೀಗೆ ಕೇಳಿ ಪಡೆಯಬಹುದು? ಈ ಪರಿಸ್ಥಿತಿಗೆ ನಮ್ಮ ನಾಡು–ನುಡಿ ಮತ್ತು ಸಂಸ್ಕೃತಿ ಬಗೆಗೆ ಕಿಂಚಿತ್ ಅಭಿಮಾನ, ಹೆಮ್ಮೆ ಇಲ್ಲದ ನಮ್ಮನ್ನು ನಾವೇ ದೂಷಿಸಿಕೊಳ್ಳಬೇಕು.

—ರಮಾನಂದ ಶರ್ಮಾ, ನವದೆಹಲಿ

## ಜ್ಞಾನಭರಿತ 'ಥಟ್ ಅಂತ ಹೇಳಿ'

ಜನವರಿ 12ರಂದು ಮುಗಿದ ಡಿ.ಡಿ. ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಚುನಾವಣೆ ಕುರಿತ ಕ್ವಿಜ್ ಚೆನ್ನಾಗಿತ್ತು. ಕ್ವಿಜ್ ಮಾಸ್ಟರ್ ಒಂದು ಪ್ರಶ್ನೆಗೆ ಉತ್ತರ ಬಂದ ಬಳಿಕ, ಆ ಕುರಿತು ವಿವರ ನೀಡಿದ್ದು ತುಂಬಾ ಅರ್ಥಪೂರ್ಣವಾಗಿತ್ತು. ಕೆಲವು ವಿದ್ಯಾರ್ಥಿಗಳು ಪ್ರಥಮ ಬಹುಮಾನ ಬರುವವರು ಅತಿಯಾದ ಚುರುಕುತನದಿಂದ ಹೌದೋ ಅಲ್ಲವೋ ಎಂಬ ಗೊಂದಲದಲ್ಲಿ, ಖಚಿತತೆಯ ಕೊರತೆಯಿಂದ ಬಹುಮಾನ ಕಳೆದುಕೊಂಡರು. ನೋಡಿದ ವಿದ್ಯಾರ್ಥಿಗಳಿಗಂತೂ ಅದು ಒಂದು ಪಾಠವಾಗಿತ್ತು.

—ಪ್ರೊ. ಮಧೂರು ಮೋಹನ ಕಲ್ಲೂರಾಯ, ಬೆಳ್ತಂಗಡಿ;
ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಕಾಮಿಡಿಯಲ್ಲ, ಅಶ್ಲೀಲ ಕಿಲಾಡಿ

ಮುಗ್ಧ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಅವರ ಅದ್ಭುತ ನಟನೆಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ 'ಡ್ರಾಮಾ ಜ್ಯೂನಿಯರ್' ಕಾರ್ಯಕ್ರಮ ಪ್ರಸಿದ್ಧವಾಯಿತು. ಮನೆಮಂದಿಯೆಲ್ಲ ಕುಳಿತು ನೋಡಲೇಬೇಕಾದ ಕಾರ್ಯಕ್ರಮವೆಂದು 'ಝೀ ಕನ್ನಡ ವಾಹಿನಿ' ಖ್ಯಾತಿ ಪಡೆಯಿತು. ಅದೇ ವಾಹಿನಿಯಲ್ಲಿ ಈಗ ಬರುತ್ತಿರುವ 'ಕಾಮಿಡಿ ಕಿಲಾಡಿ'ಗಳು ಸದಭಿರುಚಿಯ ಕನ್ನಡಿಗರು ನೋಡುವಂತಹದೇ ಅಲ್ಲ. ಅಶ್ಲೀಲ ಪದಗಳು ಪ್ರತಿದಿನವೂ ಇದ್ದೇ ಇರುತ್ತವೆ. ಗದ್ದಲಗಳಿಂದ ತುಂಬಿದ ಈ 'ಕಾಮಿಡಿ' ಪೂರ್ತಿ ವಾಕರಿಕೆ ತರಿಸಿದೆ. 'ನಿಗೂಢ ರಾತ್ರಿಗಳು' ಧಾರಾವಾಹಿಯಂತೂ ಬರೀ ಬೋರು! ಇಲ್ಲಿಯ ಗಂಡಸರಿಗಂತೂ ಉದ್ಯೋಗವೇ ಇಲ್ಲ. ಬರಿದೆ ಪಿಳಿಪಿಳಿ ಕಣ್ಣು ಬಿಡುತ್ತ ನಿಗೂಢತೆಯನ್ನು ಹುಡುಕುತ್ತಿರುವುದೊಂದೇ ಕೆಲಸ!

—ಅರುಣಕುಮಾರ್ ಮತ್ತು ಸಹೋದರರು, ಗದಗ

## ಹಾಕಿದ್ದೇ ಹಾಕಬೇಡಿ

ಉದಯ ಟಿ.ವಿ.ಯಲ್ಲಿ ರಾತ್ರಿ ಹತ್ತು ಗಂಟೆಗೆ ಪ್ರಸಾರವಾಗುವ 'ತುಂಡ್ ಹೈಕಳ ತುಂಟಾಟ' ದಲ್ಲಿ ಹಾಕಿದ್ದೇ ಜೋಕನ್ನು ಮತ್ತೆ ಮತ್ತೆ ಹಾಕಲಾಗುತ್ತಿದೆ. ದಯವಿಟ್ಟು ಹಾಕಿದ್ದನ್ನೇ ಹಾಕಬೇಡಿ.

—ಎಸ್ಸೆಸ್ಕೆ, ಕಡೂರು